**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

**ವಿಷಯ :** 2016-17 ನೇ ಸಾಲಿಗೆ ಸರ್.ಸಿ.ವಿ.ರಾಮನ್ ಮತ್ತು ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನಕ್ಕೆ 3ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ :**
1. ಸರ್ಕಾರದ ಆದೇಶ ಸಂಖ್ಯೆ:ಇಡಿ/65/ಹೆಚ್‌ಪಿಸಿ/2012. ಬೆಂಗಳೂರು. ದಿ:17.09.2012.
2. ಈ ಕಛೇರಿ ಸುತ್ತೋಲೆ ಸಂಖ್ಯೆ:ಕಾಶಿಇ/81/ಹಿಂವಕಿ/ವಿವೇ/2014-15. ದಿ:27.02.2015.
3. ಈ ಕಛೇರಿ ಪತ್ರ ಸಂಖ್ಯೆ:ಕಾಶಿಇ/51/ಸುತ್ತೋಲೆ/2016-17/ವಿ.ವೇ, ದಿ:18.06.2016.
4. ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಹೆಚ್‌ಪಿಸಿ/2016, ದಿನಾಂಕ:25.04.2016, 27.05.2016, 01.08.2016.
5. ಸರ್ಕಾರದ ಆದೇಶ ಸಂಖ್ಯೆ:ಇಡಿ/38/ಹೆಚ್‌ಪಿಸಿ/2016. ದಿ:16.05.2016.
6. ಸರ್ಕಾರದ ಮೂರನೇ ಕಂತಿನ ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಇಡಿ/37/ ಹೆಚ್‌ಪಿಸಿ/2016.ದಿನಾಂಕ:01.10.2016.
7. ಸಮಸಂಖ್ಯೆಯ ಈ ಕಛೇರಿಯ ಆದೇಶದ ದಿ:23.05.2016 ಹಾಗೂ 15.09.2016.

************

**ಪ್ರಸ್ತಾವನೆ :**

ಉಲ್ಲೇಖ (2) ಮತ್ತು (3) ರನ್ವಯ ಸರ್.ಸಿ.ವಿ.ರಾಮನ್ ಮತ್ತು ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ ನೀಡಿಕೆ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಈಗಾಗಲೇ ಸೂಚನೆ ನೀಡಿದೆ. ಉಲ್ಲೇಖ (7) ರಂತೆ ಈಗಾಗಲೇ ಒಂದು ಮತ್ತು ಎರಡನೇ ಕಂತಿನಲ್ಲಿ ಸಂಚಿ ಹೊನ್ನಮ್ಮ ಹಾಗೂ ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಉಲ್ಲೇಖ (6)ರ ಆದೇಶದಲ್ಲಿ ಸರ್ಕಾರವು 3ನೇ ಕಂತಿನ ಅನುದಾನ ಬಿಡುಗಡೆ ಮಾಡಿರುವುದರಿಂದ ಸದರಿ ಅನುದಾನದಲ್ಲಿ 2016-17ನೇ ಸಾಲಿಗೆ ಸರ್.ಸಿ.ವಿ.ರಾಮನ್ ಮತ್ತು ಸಂಚಿ ಹೊನ್ನಮ್ಮ ನೂತನ ಮತ್ತು ನವೀಕರಣ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ಮಂಜೂರು ಮಾಡುವ ಸಲುವಾಗಿ 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/20/ಪ್ರಾ.ಜಂ./ಅನುದಾನ ಬಿಡುಗಡೆ/2016-17/ವಿ.ವೇ, ದಿ: 20.10.2016.**
09-11-16

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್.ಸಿ.ವಿ.ರಾಮನ್ ಮತ್ತು ಸಂಚಿ ಹೊನ್ನಮ್ಮ ನೂತನ ಮತ್ತು ನವೀಕರಣ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ಈ ಕೆಳಕಂಡಂತೆ 2016-17ನೇ ಸಾಲಿಗೆ 3ನೇ ಕಂತಿನ ಅನುದಾನವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ

ಬಿಡುಗಡೆ ಮಾಡಲಾಗಿದೆ. ಜಂಟಿ ನಿರ್ದೇಶಕರು, ಪ್ರಾದೇಶಿಕವಾರು ಬಿಡುಗಡೆ ಮಾಡಿರುವ ಅನುದಾನವನ್ನು ಅನುಬಂಧ-1 ರಿಂದ 6 ರಲ್ಲಿ ತೋರಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| **"ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ"** | | | | |
| 1 | 2202-03-107-1-10-117 (P) (GEN) | 25.00 | 500 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| | **ಒಟ್ಟು ಮೊತ್ತ (ರೂ.ಇಪ್ಪತ್ತೈದು ಲಕ್ಷಗಳು ಮಾತ್ರ)** | **25.00** | **500** | |
| **"ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ"** | | | | |
| 2 | 2202-03-107-1-10-117 (P) (GEN) | 62.50 | 3125 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| | **ಒಟ್ಟು ಮೊತ್ತ (ರೂ.ಅರವತ್ತೆರಡು ಲಕ್ಷದ ಐವತ್ತು ಸಾವಿರಗಳು ಮಾತ್ರ)** | **62.50** | **3125** | |

**<u>2016-17ನೇ ಸಾಲಿಗೆ ನವೀಕರಣ & ನೂತನ ವಿದ್ಯಾರ್ಥಿವೇತನ ಮಂಜೂರು ಮಾಡುವಾಗ ಅನುಸರಿಸಬೇಕಾದ ನಿಬಂಧನೆಗಳು :-</u>**

1. ಮೊದಲಿಗೆ 2014-15 ಮತ್ತು 2015-16ನೇ ಸಾಲಿಗೆ ಮಂಜೂರು ಮಾಡಲಾದ ವಿದ್ಯಾರ್ಥಿವೇತನಗಳನ್ನು 2016-17ನೇ ಸಾಲಿಗೆ ನವೀಕರಣಗೊಳಿಸುವುದು (ನಿಯಮಗಳನ್ವಯ).
2. ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಒಳಪಡುವ ಎಲ್ಲಾ ಜಿಲ್ಲೆಗಳ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಂದ 2016-17ನೇ ಸಾಲಿಗೆ ಸ್ವೀಕೃತವಾದ ನೂತನ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾವಾರು, ಗರಿಷ್ಠ ಅಂಕದಿಂದ ಕನಿಷ್ಠ ಅಂಕದವರೆಗೆ ಮೆರಿಟ್ ಆಧಾರದ ಮೇಲೆ (In descending orders) ಪಟ್ಟಿ ತಯಾರಿಸಿ ಅನುಮೋದನೆ/ಮಂಜೂರಾತಿ ನೀಡುವುದು.
3. ಆಯ್ಕೆಗೊಂಡ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಕಾಲೇಜುವಾರು ಪಟ್ಟಿ ತಯಾರಿಸಿ ವಿದ್ಯಾರ್ಥಿವೇತನ ಬಿಡುಗಡೆಗೆ ಕ್ರಮಕೈಗೊಳ್ಳುವುದು.
4. ತಮಗೆ ಒದಗಿಸಿರುವ ಅನುದಾನದ ಅನ್ವಯ ವಿದ್ಯಾರ್ಥಿಗಳ ಪಟ್ಟಿಯನ್ನು (cut off marks) ಸಿದ್ಧಪಡಿಸುವುದು.

5. ಪಟ್ಟಿ ತಯಾರಿಸುವ ಸಮಯದಲ್ಲಿ ಎಲ್ಲಾ ಜಿಲ್ಲೆಗಳ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ (ಅನುಪಾತದಂತೆ) ವಿದ್ಯಾರ್ಥಿವೇತನ ಮಂಜೂರು ಮಾಡುವುದು.
6. ಖಜಾನೆ-2 ನಲ್ಲಿ ಬಿಲ್ ಸಿದ್ಧಪಡಿಸಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿವೇತನ ಮೊತ್ತ ಮಂಜೂರು ಮಾಡಲು ಕ್ರಮಕೈಗೊಳ್ಳುವುದು.
7. ವಿದ್ಯಾರ್ಥಿವೇತನ ಮಂಜೂರು ಮಾಡುವ ಸಮಯದಲ್ಲಿ ಪಾರದರ್ಶಕತೆ ಕಾಪಾಡುವುದು ಹಾಗೂ ಯಾವುದೇ ದೂರಿಗೆ (ವಿದ್ಯಾರ್ಥಿ/ಪೋಷಕರಿಂದ) ಆಸ್ಪದವಿಲ್ಲದಂತೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.
8. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತ (Lapse) ಆಗದಂತೆ ಮುಂಜಾಗ್ರತೆ ವಹಿಸುವುದು.

ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಸರ್.ಸಿ.ವಿ.ರಾಮನ್ ಮತ್ತು ಸಂಚಿ ಹೊನ್ನಮ್ಮ ನೂತನ ಮತ್ತು ನವೀಕರಣ ವಿದ್ಯಾರ್ಥಿವೇತನಗಳಿಗೆ ಬಿಡುಗಡೆ ಮಾಡಿರುವ ಅನುದಾನಗಳನ್ನು ಲಗತ್ತಿಸಲಾದ ಅನುಬಂಧಗಳಲ್ಲಿ ನೀಡಲಾಗಿದೆ. ಕೂಡಲೇ ಎಲ್ಲಾ ಅನುದಾನಗಳನ್ನು ಬಳಸಿಕೊಂಡು 2016-17ನೇ ಸಾಲಿನಲ್ಲಿ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನದ ಒಟ್ಟು ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ಈ ಆದೇಶದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ಲೆಕ್ಕಾಧಿಕಾರಿಗಳು ಮತ್ತು ಜಂಟಿ ನಿರ್ದೇಶಕರ ಸಹಿಯೊಂದಿಗೆ ರವಾನಿಸಲು ಸೂಚಿಸಿದೆ. ಮೇಲ್ಕಂಡ ಮೊತ್ತದಲ್ಲಿ ಎಲ್ಲಾ ಯೋಜನೆಗಳಡಿ ಬಿಡುಗಡೆಯಾಗಿರುವ ಎಲ್ಲಾ ಮೊತ್ತವನ್ನು ಯಾವುದೇ ಕಾರಣಕ್ಕೂ ಅಧ್ಯರ್ಪಿಸದೇ (should not surrender) ಹಾಗೂ ಮೇಲ್ಕಂಡ ಯಾವುದೇ ಅನುದಾನ ವ್ಯಪಗತ (Lapse) ವಾಗದಂತೆ ಅಗತ್ಯ ಕ್ರಮವಹಿಸಲು ಮತ್ತೊಮ್ಮೆ ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ :**

ಜಂಟಿ ನಿರ್ದೇಶಕರುಗಳು, ಪ್ರಾದೇಶಿಕ ಕಛೇರಿ, ಬೆಂಗಳೂರು/ಮೈಸೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಕಲ್ಬುರ್ಗಿ.

**ಪ್ರತಿಯನ್ನು ಶೀಘ್ರ ಕ್ರಮಕ್ಕಾಗಿ ಕಳುಹಿಸಿದೆ:**

1. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು ಹಾಗೂ ಎಲ್ಲಾ ಪ್ರಾದೇಶಿಕ ಕಛೇರಿಗಳು – ಮಾಹಿತಿಗಾಗಿ.
2. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
3. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
4. ಕಛೇರಿ ಪ್ರತಿ.

**ಆದೇಶ ಸಂಖ್ಯೆ:ಕಾಶಿಇ/20/ಪ್ರಾ.ಜಂ/ಅನುದಾನ ಬಿಡುಗಡೆ/2016-17/ವಿ.ವೇ, ದಿ:20.10.2016.ಕ್ಕೆ ಸಂಬಂಧಿಸಿದಂತೆ**

## ಅನುಬಂಧ-1

## ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| | “ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ” | | | |
| 1 | 2202-03-107-1-10-117 (P) (GEN) | 4.20 | 84 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| | ಒಟ್ಟು ಮೊತ್ತ (ರೂ. ನಾಲ್ಕು ಲಕ್ಷದ ಇಪ್ಪತ್ತು ಸಾವಿರಗಳು ಮಾತ್ರ) | 4.20 | 84 | |
| | “ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ” | | | |
| 2 | 2202-03-107-1-10-117 (P) (GEN) | 10.42 | 521 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| | ಒಟ್ಟು ಮೊತ್ತ (ರೂ.ಹತ್ತು ಲಕ್ಷದ ನಲವತ್ತೆರಡು ಸಾವಿರಗಳು ಮಾತ್ರ) | 10.42 | 521 | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ:ಕಾಶಿಇ/20/ಪ್ರಾ.ಜಂ/ಅನುದಾನ ಬಿಡುಗಡೆ/2016-17/ವಿ.ವೇ, ದಿ:20.10.2016.ಕ್ಕೆ ಸಂಬಂಧಿಸಿದಂತೆ

ಅನುಬಂಧ-2

ಪ್ರಾದೇಶಿಕ ಜಂಟಿ ನಿರ್ದೇಶಕರು, ಮೈಸೂರು

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| "ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ" | | | | |
| 1 | 2202-03-107-1-10-117 (P) (GEN) | 4.15 | 83 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| | ಒಟ್ಟು ಮೊತ್ತ (ರೂ. ನಾಲ್ಕು ಲಕ್ಷದ ಹದಿನೈದು ಸಾವಿರಗಳು ಮಾತ್ರ) | 4.15 | 83 | |
| "ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ" | | | | |
| 2 | 2202-03-107-1-10-117 (P) (GEN) | 10.42 | 521 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| | ಒಟ್ಟು ಮೊತ್ತ (ರೂ.ಹತ್ತು ಲಕ್ಷದ ನಲವತ್ತೆರಡು ಸಾವಿರಗಳು ಮಾತ್ರ) | 10.42 | 521 | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ:ಕಾಶಿಇ/20/ಪ್ರಾ.ಜಂ/ಅನುದಾನ ಬಿಡುಗಡೆ/2016-17/ವಿ.ವೇ, ದಿ:20.10.2016.ಕ್ಕೆ ಸಂಬಂಧಿಸಿದಂತೆ

## ಅನುಬಂಧ-3

## ಪ್ರಾದೇಶಿಕ ಜಂಟಿ ನಿರ್ದೇಶಕರು, ಮಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| | **"ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ"** | | | |
| 1 | 2202-03-107-1-10-117 (P) (GEN) | 4.15 | 83 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| | ಒಟ್ಟು ಮೊತ್ತ (ರೂ. ನಾಲ್ಕು ಲಕ್ಷದ ಹದಿನೈದು ಸಾವಿರಗಳು ಮಾತ್ರ) | 4.15 | 83 | |
| | **"ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ"** | | | |
| 2 | 2202-03-107-1-10-117 (P) (GEN) | 10.42 | 521 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| | ಒಟ್ಟು ಮೊತ್ತ (ರೂ.ಹತ್ತು ಲಕ್ಷದ ನಲವತ್ತೆರಡು ಸಾವಿರಗಳು ಮಾತ್ರ) | 10.42 | 521 | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ:ಕಾಶಿಇ/20/ಪ್ರಾ.ಜಂ/ಅನುದಾನ ಬಿಡುಗಡೆ/2016-17/ವಿ.ವೇ, ದಿ:20.10.2016.ಕ್ಕೆ ಸಂಬಂಧಿಸಿದಂತೆ

## ಅನುಬಂಧ-4

## ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| "ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ" | | | | |
| 1 | 2202-03-107-1-10-117 (P) (GEN) | 4.15 | 83 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/-ಗಳಂತೆ |
| | ಒಟ್ಟು ಮೊತ್ತ (ರೂ. ನಾಲ್ಕು ಲಕ್ಷದ ಹದಿನೈದು ಸಾವಿರಗಳು ಮಾತ್ರ) | 4.15 | 83 | |
| "ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ" | | | | |
| 2 | 2202-03-107-1-10-117 (P) (GEN) | 10.42 | 521 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/-ಗಳಂತೆ |
| | ಒಟ್ಟು ಮೊತ್ತ (ರೂ.ಹತ್ತು ಲಕ್ಷದ ನಲವತ್ತೆರಡು ಸಾವಿರಗಳು ಮಾತ್ರ) | 10.42 | 521 | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ:ಕಾಶಿಇ/20/ಪ್ರಾ.ಜಂ/ಅನುದಾನ ಬಿಡುಗಡೆ/2016-17/ವಿ.ವೇ, ದಿ:20.10.2016.ಕ್ಕೆ ಸಂಬಂಧಿಸಿದಂತೆ

## ಅನುಬಂಧ-5

## ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| "ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ" | | | | |
| 1 | 2202-03-107-1-10-117 (P) (GEN) | 4.20 | 84 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| | ಒಟ್ಟು ಮೊತ್ತ (ರೂ. ನಾಲ್ಕು ಲಕ್ಷದ ಇಪ್ಪತ್ತು ಸಾವಿರಗಳು ಮಾತ್ರ) | 4.20 | 84 | |
| "ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ" | | | | |
| 2 | 2202-03-107-1-10-117 (P) (GEN) | 10.42 | 521 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| | ಒಟ್ಟು ಮೊತ್ತ (ರೂ.ಹತ್ತು ಲಕ್ಷದ ನಲವತ್ತೆರಡು ಸಾವಿರಗಳು ಮಾತ್ರ) | 10.42 | 521 | |

ಕಾಲೇಜು ಶಿಕ್ಷಣ ನಿರ್ದೇಶಕರು.

ಆದೇಶ ಸಂಖ್ಯೆ:ಕಾಶಿಇ/20/ಪ್ರಾ.ಜಂ/ಅನುದಾನ ಬಿಡುಗಡೆ/2016-17/ವಿ.ವೇ, ದಿ:20.10.2016.ಕ್ಕೆ ಸಂಬಂಧಿಸಿದಂತೆ

ಅನುಬಂಧ-6

ಪ್ರಾದೇಶಿಕ ಜಂಟಿ ನಿರ್ದೇಶಕರು, ಕಲ್ಬುರ್ಗಿ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ 3ನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| "ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ" | | | | |
| 1 | 2202-03-107-1-10-117 (P) (GEN) | 4.15 | 83 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| | ಒಟ್ಟು ಮೊತ್ತ (ರೂ. ನಾಲ್ಕು ಲಕ್ಷದ ಹದಿನೈದು ಸಾವಿರಗಳು ಮಾತ್ರ) | 4.15 | 83 | |
| "ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ" | | | | |
| 2 | 2202-03-107-1-10-117 (P) (GEN) | 10.40 | 520 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| | ಒಟ್ಟು ಮೊತ್ತ (ರೂ.ಹತ್ತು ಲಕ್ಷದ ನಲವತ್ತು ಸಾವಿರಗಳು ಮಾತ್ರ) | 10.40 | 520 | |

ಕಾಲೇಜು ಶಿಕ್ಷಣ ನಿರ್ದೇಶಕರು